ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತಾಳೆ. ಈ ಪ್ರಕ್ರಿಯೆಯಲ್ಲಿ ಮುಂದೊಮ್ಮೆ ತನಗೆ ಅತ್ಯಾಚಾರ ಮಾಡಿದ್ದ ಗೆಳೆಯನಿಗೆ ಪತ್ರ ಬರೆಯುತ್ತಾಳೆ. ಮೂರು ವರ್ಷ ಅವರ ನಡುವೆ ಪತ್ರ ಸಂವಹನ ನಡೆಯುತ್ತದೆ. ಒಂಬತ್ತು ವರ್ಷದ ಬಳಿಕ ಅವರು ಭೇಟಿಯಾಗುತ್ತಾರೆ. ಆಗ ಅವರಿಬ್ಬರೂ ನಡೆದು ಹೋದ ದುರಂತದ ಬಗ್ಗೆ ತಮ್ಮ ಅನಿಸಿಕೆ, ಕಾಳಜಿಗಳ ಸಮೇತ ಒಂದೇ ಪುಸ್ತಕ ಬರೆಯುತ್ತಾರೆ! ಇಲ್ಲಿ ಸಂಬಂಧ ಉಳಿಯಿತಾ, ಬೆಳೆಯಿತಾ, ಅರ್ಥವಾಯಿತಾ, ನಿಜವಾಗಿ ಹುಟ್ಟಿತಾ, ಸಂಕೇತವಾಯಿತಾ, ಸಂದೇಶವಾಯಿತಾ? ಬೆಳಕು ಕಣವೂ ಹೌದು, ಅಲೆಯೂ ಹೌದು ಎಂದಾದರೆ ಸಂಬಂಧವೆಂಬುದು ಘನವೂ ಹೌದು, ದ್ರವವೂ ಹೌದು, ಭಾವವೂ ಹೌದು, ಅರ್ಥವೂ ಹೌದು, ನದಿಯೂ ಹೌದು, ಸಮುದ್ರವೂ ಹೌದು... ಹೀಗೆ ಏನೇನೋ ಹೇಳಬೇಕೆನಿಸುತ್ತದೆ.

ನಾವು ಬಾಳುತ್ತಿರುವ ಈ ಅಸ್ಥಿರವೆನಿಸುವ ಲೋಕದಲ್ಲಿ ಚಾಂಚಲ್ಯದ ಆಟ ನಡೆದಿದೆ. ಹಾಗಾಗಿ ಇಬ್ಬಂದಿತನ ಇಲ್ಲಿ ಹೊಸತಲ್ಲ. ಕೆಲವೊಮ್ಮೆ ಸಹಜತೆಯೂ ಕೃತಕವೆಂಬಂತೆ ಕಾಣುತ್ತಿದೆ. ತಾಯಿ ಮೇಲಿನ ಪ್ರೀತಿಯು ಮನೆಯಲ್ಲಿ ಹೇಗಾದರೂ ಇರಲಿ 'ಅಮ್ಮಂದಿರ ದಿನ'ದಂದು ಅದು ಚಿತ್ರವತ್ತಾಗಿ ಕಂಡರೆ ಸಾಕು. ಸಹಜವನ್ನು ಅಸಹಜ ಭಾಷೆಯಲ್ಲಿ ಮುಚ್ಚುವ ಕಲೆ ಕರಗತವಾಗಿದೆ. ಇಂತಲ್ಲಿ ಸಂಬಂಧವನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿರುವಾಗ ಅದರೊಳಗಿನ ಅಸಂಬಂಧ ಎಂಬ ಅನ್ಯಮನಸ್ಕ ಸೂಕ್ಷ್ಮವನ್ನು ಊಹಿಸುವ ವ್ಯವಧಾನವಾದರೂ ಯಾರಿಗಿದೆ? ಸಂಬಂಧವನ್ನು ಬೇಕಿದ್ದಲ್ಲಿ ಇಟ್ಟುಕೊಳ್ಳಬಹುದು ಇಲ್ಲವಾದಲ್ಲಿ ಬಿಡಬಹುದು ಎಂಬುದು ದೈನಿಕದ ತೀರ್ಮಾನವಾಗಿದೆ. ಅಮೃತವನ್ನು ಚೆಲ್ಲಿದರೂ ಅದು ಒಂದೆಡೆಯೇ ಬೀಳುವುದಿಲ್ಲ. ಅದರ ಚಿಮ್ಮು ಚಾಚುಗಳು ಇರುತ್ತವೆ. ಇವು ಅರಿಯಬೇಕಾದ ಗಮನಿಸಬೇಕಾದ ಹೀರಿಕೊಳ್ಳಬೇಕಾದ ಸೂಕ್ಷ್ಮಗಳು. ಕವಿ ಎಚ್.ಆರ್. ರಮೇಶರ ಕವನವೊಂದು ಹೀಗೆ ಮುಗಿಯುತ್ತದೆ–

ಒಂದು ಕಪ್ಪು ಚಹಾ ಮಾಡಿಕೊಡು
ಈ ಪದ್ಯ ಅರ್ಥ ಆಗ್ತಾ ಇಲ್ಲ
ಅರ್ಥ ಆಗೋದು ಅಂದರೆ ಆಕಾಶ ಮುಟ್ಟೋದು
ಕಣ್ಣಿಗೆ ಕಾಣೋದೇ ಆಕಾಶ
ಕಾಫಿ ಚೆನ್ನಾಗಿದೆ.

ಚಹಾ, ಪದ್ಯ, ಆಕಾಶ, ನೋಟ, ಕಾಫಿಗಳ ವಿಪರೀತ ಸಂಲಗ್ನದಲ್ಲಿ ಸಂಬಂಧವನ್ನು ಇಟ್ಟು ನೋಡಬಹುದೇ?

## ಜಿ.ಕೆ. ರವೀಂದ್ರಕುಮಾರ್ (1961 – 2019)

ಕವಿ, ವಿಮರ್ಶಕ ರವೀಂದ್ರಕುಮಾರ್ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯವರು. 'ಸಿಕಾಡ', 'ಪ್ಯಾಂಜಿಯಾ', 'ಕದವಿಲ್ಲದ ಊರಲ್ಲಿ', 'ಒಂದುನೂಲಿನ ಜಾಡು', 'ಮರವನಪ್ಪಿದ ಬಳ್ಳಿ' ಅವರ ಕವನ ಸಂಕಲನಗಳು. ಅವರ ನಿಧನದ ಬಳಿಕ ಸಮಗ್ರ ಕವಿತೆಗಳ ಸಂಗ್ರಹ 'ಇದಕ್ಕೊಂದು ಪದವ ತೊಡಿಸು' ಪ್ರಕಟವಾಗಿದೆ. ಅವರ ಪ್ರಬಂಧಗಳ ಸಂಕಲನ – 'ತಾರಸೀ ಮಲ್ಹಾರ್'. 'ಸುಪ್ತಸ್ವರ' (ಅಂಕಣ), 'ಪುನರ್ಭವ' (ವಿಮರ್ಶೆ), 'ಜ್ಞಾನದೇವನ ಬೋಧನೆಗಳು' (ಅನುವಾದ), 'ಜುಗಲ್ಬಂದಿ ಚಿಂತಕ ಯು.ಆರ್. ಅನಂತಮೂರ್ತಿ' ಮುಂತಾದ ಕೃತಿಗಳು ಪ್ರಕಟವಾಗಿವೆ. ಬೆಂಗಳೂರು ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿದ್ದರು.